ಕರ್ನಾಟಕ ವಿಧಾನ ಸಭೆ

ಬುಧವಾರ, 8ನೇ ಫೆಬ್ರುವರಿ ತಿಂಗಳು 1984

ವಿಧಾನ ಸೌಧದ ವಿಧಾನ ಸಭೆಯ ಸಭಾಂಗಣದಲ್ಲಿ ಸದನವು ಬೆಳಿಗ್ಗೆ 11 ಘಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಡಿ. ಬಿ. ಚಂದ್ರೇಗೌಡ) ಅವರು ಪೀಠವನ್ನು ಅಲಂಕರಿಸಿದರು.

1. ಸಂತಾಪ ಸೂಚಕ ನಿರ್ಣಯ

ಅಧ್ಯಕ್ಷರು.— ಈ ಮನೆಯ ಮಾಜಿ ಸದಸ್ಯರಾದ ಶ್ರೀ ಕೆ. ಕೃಷ್ಣಪ್ಪನವರು ದಿನಾಂಕ 7-2-1984 ರಂದು ವಿಧಿವಶರಾದರು ಎಂದು ತಿಳಿಸಲು ನನಗೆ ವಿಷಾದವಾಗುತ್ತದೆ. ಅವರು ಮೂರನೇ ಸಾರ್ವತ್ರಿಕ ಚುನಾವಣೆಯಲ್ಲಿ ಬಸವನಗುಡಿ ಕ್ಷೇತ್ರದಿಂದ ವಿಧಾನಸಭೆಗೆ ಆಯ್ಕೆಯಾಗಿದ್ದರು. 1962 ರಿಂದ 1970 ರವರೆಗೆ ವಿಧಾನ ಪರಿಷತ್ತಿನ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದರು. ಈ ಮೊದಲು 1966 ರಲ್ಲಿ ಬೆಂಗಳೂರಿನ ಮಹಾನಗರಸಭೆಯ ಮೇಯರ್ ಆಗಿ ಸೇವೆ ಸಲ್ಲಿಸಿದ್ದಾರೆ. ಶ್ರೀಯುತರು ನಿಧನ ಹೊಂದಿರುವ ಕಾರಣ ಅವರ ಆತ್ಮಕ್ಕೆ ಶಾಂತಿ ಸಿಗಲೆಂದು ನಾವು ಒಂದು ನಿಮಿಷ ಕಾಲ ಎದ್ದು ನಿಂತು ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಸಭೆಯು ಒಂದು ನಿಮಿಷ ಎದ್ದುನಿಂತು ಮೌನವನ್ನು ಆಚರಿಸಿತು)

2. ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ವಿಷಯ : ರಾಜ್ಯದಲ್ಲಿರುವ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಹಿಂದುಳಿದ ಪಂಗಡದ ವಿದ್ಯಾರ್ಥಿಗಳಿಗೆ ಹಂಚಲಾದ ಸರ್ಕಾರಿ ಸೀಟುಗಳು.

ಪ್ರಶ್ನೆ. 202 (606) ಶ್ರೀ ಓಬಣ್ಣರಾಜು (ಚಾಮರಾಜ ಪೇಟೆ).— ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ರಾಜ್ಯದ ಇಂಜಿನಿಯರಿಂಗ್ ಕಾಲೇಜುಗಳಲ್ಲಿ 1979, 1980, 1981, 1982 ಮತ್ತು 1983ನೇ ಸಾಲಿನಲ್ಲಿ ಹಿಂದುಳಿದ ಬುಡಕಟ್ಟು (ಬಿಟಿ) ವಿದ್ಯಾರ್ಥಿಗಳಿಗೆ ನೀಡಲಾದ ಸರಕಾರಿ ಪ್ರವೇಶಗಳ ಸಂಖ್ಯೆ ಮತ್ತು ಅಂಥ ವಿದ್ಯಾರ್ಥಿಗಳ ಹೆಸರುಗಳು (ವರ್ಷವಾರು ಮತ್ತು ಜಾತಿವಾರು ವಿವರಗಳನ್ನು ನೀಡುವುದು);

ಆ) ಮೇಲ್ಕಂಡ ವಿದ್ಯಾರ್ಥಿಗಳ ಪಾಲಕರ, ಪೋಷಕರ ಹೆಸರು, ವಿಳಾಸ ಮತ್ತು ವೃತ್ತಿ ?

ಉತ್ತರ : ಶ್ರೀ ಬಿ. ರಾಚಯ್ಯ (ಮಾನ್ಯ ವಿದ್ಯಾಮಂತ್ರಿ).— ಅ) ಹಿಂದುಳಿದ ಬುಡಕಟ್ಟು (ಬಿಟಿ) ವಿದ್ಯಾರ್ಥಿಗಳಿಗೆ ಸರ್ಕಾರಿ ಪ್ರವೇಶಗಳನ್ನು ನೀಡಿದ ಅಂಕಿ ಅಂಶಗಳು ಈ ಕೆಳಗೆ ನಮೂದಿಸಲಾಗಿದೆ :

1. 1979-80 — 112, 2. 1980-81 — 1209, 3. 1981-82 — 107, 4. 1982-83 - 114 5. 1983-84—179. ಆ) ಮಾಹಿತಿ ತಕ್ಷಣಕ್ಕೆ ಲಭ್ಯವಿಲ್ಲ.

ಪ್ರಶ್ನೆ. 202 (606) ಶ್ರೀ ಎಂ. ಓಬಣ್ಣರಾಜು.— ನಿಮ್ಮ ಸಂಖ್ಯೆ ನನಗೆ ಬೇಕಾಗಿಲ್ಲ. ಈ ಬುಡಕಟ್ಟು ಜನಾಂಗದಲ್ಲಿ ಎಷ್ಟು ಉಪಜಾತಿಗಳಿವೆ ? ಯಾರ್ಯಾರಿಗೆ ಎಷ್ಟೆಷ್ಟು ಸೀಟುಗಳನ್ನು ಕೊಟ್ಟಿದ್ದೀರಿ ಎಂಬ ಮಾಹಿತಿ ನನಗೆ ಬೇಕಾಗಿದೆ. ದಯಮಾಡಿ ಇದನ್ನು ನನಗೆ ತರಿಸಿಕೊಡುತ್ತೀರಾ ?

ಶ್ರೀ ಬಿ. ರಾಚಯ್ಯ (ಶಿಕ್ಷಣ ಸಚಿವರು).— ಈ ಮಾಹಿತಿ ಈಗ ಲಭ್ಯ ಇಲ್ಲ. ಪ್ರತಿಯೊಬ್ಬ ವಿದ್ಯಾರ್ಥಿಯ ಹೆಸರು ಮತ್ತು ಯಾವ್ಯಾವ ಪಂಗಡಗಳಿಗೆ ಸೇರಿದ್ದಾರೆ ಎನ್ನುವ ವಿವರ ಈಗ ಸರ್ಕಾರದ ಮಟ್ಟದಲ್ಲಿ ಇಲ್ಲ. ಪ್ರತಿಯೊಂದು ಕಾಲೇಜಿಗೂ ಬರೆದು ತರಿಸಬೇಕಾಗುತ್ತದೆ. ಇದನ್ನು ತರಿಸಿ ಕಳಿಸಿ ಕೊಡುತ್ತೇನೆ.

ವಿಷಯ : ಲಿಂಗಸುಗೂರು ತಾಲ್ಲೂಕಿನಲ್ಲಿ ಕುಡಿಯುವ ನೀರು ಸರಬರಾಜು ಯೋಜನೆ.

ಪ್ರಶ್ನೆ. 203 (639) ಶ್ರೀ ಬಸವರಾಜ ಪಾಟೀಲ್ ಅನ್ವರಿ (ಲಿಂಗಸಗೂರು).— ಮಾನ್ಯ ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

1. ಲಿಂಗಸುಗೂರು ತಾಲ್ಲೂಕಿನಲ್ಲಿ ಕುಡಿಯುವ ನೀರಿನ ನಳದ ಯೋಜನೆಯಲ್ಲಿ ಯಾವ ಯಾವ ಹಳ್ಳಿಗಳು ಮಂಜೂರು ಆಗಿವೆ. ಆಗಿದ್ದರೆ ಯಾವ ಹಳ್ಳಿಗಳು ಪೂರ್ತಿಯಾಗಿವೆ. ಮಂಜೂರಾದ ಉಳಿದ ಹಳ್ಳಿಗಳಿಗೆ ಯಾವಾಗ ಯೋಜನೆ ಪೂರ್ತಿಯಾಗುತ್ತದೆ. ಆದರಲ್ಲಿ ಸಾನಬಾಳ ರೋಡಲಬಂಡಾ, ಸರ್ಜಾಪುರ ಹಳ್ಳಿಗಳಿಗೆ ನೀರು ಪೂರೈಕೆಯ ಯೋಜನೆಯನ್ನು ಎಂದು ಪೂರ್ತಿಗೊಳಿಸಲಾಗುತ್ತದೆ;

2. 1984-85ರ ಸಾಲಿನಲ್ಲಿ ಲಿಂಗಸಗೂರು ತಾಲ್ಲೂಕಾದ ಎಷ್ಟು ಹಳ್ಳಿಗಳನ್ನು ನೀರಿನ ನಳದ ಯೋಜನೆಯಲ್ಲಿ ಸೇರಿಸಿದ್ದೀರಿ; ಹಾಗಿದ್ದಲ್ಲಿ ಭೂಪುರ, ಅಮರೇಶ್ವರ, ಮೆದಿಕಿನಾಳ, ಅಂಕಸದೊಡ್ಡಿ, ತಲಿಯಾನ ಗುಂಡಸಾಗರ ಗ್ರಾಮಗಳು ಸೇರಿವೆಯೆ;

3. ಲಿಂಗಸಗೂರು ತಾಲ್ಲೂಕಾ ಕಾಚಾಪುರ, ನೀಲಗಲ್ಲ, ಹೀರೆಹೆಸರೂರ, ಯರಡೋಣಾ ಈ ಗ್ರಾಮಗಳಿಗೆ ಯಾವ ವರ್ಷದಲ್ಲಿ ನಳದ ಯೋಜನೆ ಮಂಜೂರಾಗಿದೆ. ಯಾವಾಗ ಕೆಲಸ ಮುಗಿದವು. ಈ ಯೋಜನೆಯಿಂದ ಗ್ರಾಮದ ಜನರಿಗೆ ಕುಡಿಯುವ ನೀರಿನ ವ್ಯವಸ್ಥೆ ಸರಿಯಿಲ್ಲ ಎಂದು ಸರ್ಕಾರದ ಗಮನಕ್ಕೆ ಬಂದಿದೆಯೋ; ಹಾಗಿದ್ದಲ್ಲಿ ಇದರ ಬಗ್ಗೆ ಸರ್ಕಾರ ಯಾವ ಕ್ರಮಗಳನ್ನು ತೆಗೆದುಕೊಂಡಿದೆ ?

ಉತ್ತರ : ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) —ಲಿಂಗಸಗೂರು ತಾಲ್ಲೂಕಿನ ರಾಷ್ಟ್ರೀಯ ಗ್ರಾಮೀಣ ನೀರು ಸರಬರಾಜು ಯೋಜನೆ ಅಂಗವಾಗಿ ಒಟ್ಟು 34 ಗ್ರಾಮಗಳು ಮಂಜೂರಾಗಿವೆ. ಆದರಲ್ಲಿ 17 ಯೋಜನೆ ಪೂರ್ತಿಗೊಂಡಿರುವುದು, 17 ಯೋಜನೆ ಕೆಲಸ ಪ್ರಗತಿ ಹಂತದಲ್ಲಿವೆ. ಗ್ರಾಮದ ಹೆಸರು ಈ ಕೆಳಗಿನಂತಿವೆ.

ಅ) ಪೂರ್ತಿಗೊಂಡ ಯೋಜನೆಗಳು :

1. ಗುರುಗುಂಟಾ
2. ಮಟ್ಟೂರು
3. ಪಟ್ಟಿ
4. ಯರಡೋಣಾ
5. ಹೀರೇಹೆಸರೂರು
6. ಸಂತೆಕಲ್ಲೂರು
7. ಕಾಚಾಪುರ
8. ಆನಾಪೂಸರು
9. ಮಸ್ಕಿ
10. ಈಚನಾಳ
11. ಗೆಜ್ಜಲಗಟ್ಟ
12. ನೀಲೂಗಲ್ಲ
13. ಕುನ್ಮಿಕಲ್ಲೂರ ಮತ್ತಿಕಲ್ಲೂರು
14. ಬೂಗಾಪುರ
15. ಗುಡಿಹಾಳ
16. ರೊಡಲಬಂಡಾ
17. ಹಿರೇಜಾವುರವು
18. ಹೊನ್ನಳ್ಳಿ

ಪ್ರಗತಿ ಹಂತದಲ್ಲಿರುವ ಯೋಜನೆಗಳು :

19. ಕುಪ್ಪಿಗುಡ್ಡ
20. ಹಿರೇನಾಗನೂರ
21. ಮಸ್ಕಿ(ಸುಧಾರಣೆ)
22. ಸಾನಬಾಳ
23. ಮೆದಿಗಾಪುರ
24. ಪಟ್ಟಿ (ಸುಧಾರಣೆ)
25. ರೊಡಲಬಂಡಾ ತವಗಾ ಕಜ್ಜೊಣಾ
26. ಮೆದಿಕಿನಾಳ
27. ಮಾವಿನಬಾವಿ
28. ಯರಡೋಣಾ ಸುಧಾರಣೆ
29. ನಾಗರಹಾಳ್
30. ಕನಸಾವಿ
31. ಸರ್ಜಾಪುರ
32. ಅನ್ವರಿ
33. ಗುಟ್ಟದನಾಳ್
34. ಕೋತೆ
35. ಗೌಡುರ್.

ಮಂಜೂರಾದ ಈ ಹಳ್ಳಿಗಳ ಪೈಕಿ 1983-84 ನೇ ಸಾಲಿನಲ್ಲಿ 3 ರನ್ನು 1. ಮಸ್ಕಿ ಸುಧಾರಣೆ 2. ಕುಪ್ಪಿಗುಡ್ಡಾ, 3. ಕನಸಾವಿಯನ್ನು 1984-85ನೇ ಸಾಲಿನ 2ನ್ನು 1. ಯರಡೋಣಾ ಸುಧಾರಣೆ 2. ಅನ್ವರಿ ಗ್ರಾಮಗಳನ್ನು ಪೂರ್ತಿ ಮುಗಿಸಲಾಗುವುದು. ಇನ್ನುಳಿದ 12 ಯೋಜನೆಗಳನ್ನು 1985-86ನೇ ಸಾಲಿನಲ್ಲಿ ಮುಗಿಸಲಾಗುವುದು

ಆದರಲ್ಲಿ 1. ಸಾನಬಾಳ : ಈ ಗ್ರಾಮದಲ್ಲಿ ನೀರಿನ ಮೂಲ ಇನ್ನು ಸಿಕ್ಕಿರುವುದಿಲ್ಲ ನೀರಿನ ಮೂಲ ಸಿಕ್ಕ ನಂತರ ಗ್ರಾಮಕ್ಕೆ ನೀರಿನ ಸರಬರಾಜು ಮಾಡಲಾಗುವುದು ಇದನ್ನು 1985-86ರಲ್ಲಿ ಮುಗಿಸಲಾಗುವುದು.

2. ರೋಡಲಬಂಡಾ : ಈ ಗ್ರಾಮದಲ್ಲಿ ಪಂಪ್‌ಹೌಸ್ ರೈಸಿಂಗ್ ಮೇನ್ ಶೇಕಡಾ 75 ವಿತರಣಾ ಪದ್ಧತಿ ಮುಗಿದಿದೆ ಇದನ್ನು ಸಹ 1985-86 ರಲ್ಲಿ ಮುಗಿಸಲಾಗುವುದು.

3. ಸರ್ಜಾಪುರ : ಈ ಗ್ರಾಮದಲ್ಲಿ ದಿನಾಂಕ 4-7-83 ರಿಂದ, ನೀರು ಸರಬರಾಜು ಮಾಡಲಾಗುತ್ತಿದೆ. ಯೋಜನೆಯ ಎಲ್ಲಾ ಕೆಲಸ ಮುಗಿದಿದ್ದು ಚೆನ್ನಾಗಿ ಕಾರ್ಯ ನಿರ್ವಹಿಸುತ್ತಿದೆ.

1984-85ನೇ ಸಾಲಿನಲ್ಲಿ 2 ಗ್ರಾಮಗಳನ್ನು ಸೇರಿಸಲಾಗಿದೆ. ಆದರಲ್ಲಿ ಭೂಪುರ, ಅಮರೇಶ್ವರ ತಲಿಯಾನ ಗ್ರಾಮಗಳನ್ನು 1984-85ನೇ ಸಾಲಿನಲ್ಲಿ ನೀರು ಸರಬರಾಜು ಯೋಜನೆ ಸಲುವಾಗಿ 1 ಜಿಲ್ಲಾಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಅಂಕಸದೊಡ್ಡಿ ಮತ್ತು ಗಂಡಸಗರ ಗ್ರಾಮಗಳು ಜಿಲ್ಲಾ ಅಭಿವೃದ್ಧಿ ಮಂಡಳಿಯ ಸಾಲಿನಲ್ಲಿ ಪ್ರಸ್ತಾವನೆಗೆ ಬಂದಿರುವುದಿಲ್ಲಾ. ಮತ್ತು ಮೆದಿಕಿನಾಳ ಗ್ರಾಮವೂ ಈಗಾಗಲೇ ಮಂಜೂರಾತಿ ಆಗಿದೆ. ಈ ಯೋಜನೆ 1985-86ನೇ ಸಾಲಿನಲ್ಲಿ ಕೈಗೆತ್ತಿಕೊಳ್ಳಲಾಗುವುದು.

ಗ್ರಾಮದ ಜನರಿಗೆ ಕುಡಿಯುವ ನೀರಿನ ಸರಬರಾಜು ಸರಿಯಿಲ್ಲವೆಂದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. ನಾಲ್ಕು ಯೋಜನೆಗಳ ವಿವರಗಳು ಕೆಳಕಂಡಂತಿವೆ.

1. ಕಾಚಾಪುರ : ಈ ಗ್ರಾಮದ ಯೋಜನೆ 17-7-70 ರಂದು 54,000 ರೂಪಾಯಿಗಳಿಗೆ

ಮಂಜೂರಾತಿ ಆಗಿದೆ. 12:75 ರಲ್ಲಿ ಕೆಲಸ ಪೂರ್ತಿಯಾಗಿದೆ. ಇತ್ತೀಚೆಗೆ ಕೊಳವೆ ಬಾವಿಯನ್ನು ಫ್ಲಷ್ ಮಾಡಿಸಲಾಗಿದೆ. ಪಂಪ್ ಸೆಟ್ ಮಾತ್ರ ಕೂಡಿಸುವ ಕೆಲಸ ಉಳಿದಿದೆ.

2. ನೀಲಗಲ್ಲ : ಈ ಗ್ರಾಮದ ಯೋಜನೆ 19-1-69 ರಂದು 48,000 ರೂಪಾಯಿಗಳಿಗೆ ಮಂಜೂರಾತಿ ಆಗಿದೆ. 12:78 ರಲ್ಲಿ ಕೆಲಸ ಪೂರ್ತಿ ಆಗಿದೆ. ಈ ಯೋಜನೆ ಚೆನ್ನಾಗಿ ನಡೆಯುತ್ತಿದೆ. ಈ ಯೋಜನೆ ಕೆಟ್ಟು ನಿಂತ ವರದಿ ಬಂದ ನಂತರ ಈ ಯೋಜನೆಯ ದುರಸ್ಥಿ ಮಾಡಲಾಗುತ್ತಿದೆ.

3. ಹಿರೇಹೆಸರೂರ : ಈ ಯೋಜನೆ 16-1-67 ರಲ್ಲಿ 55,000 ರೂಪಾಯಿಗಳಿಗೆ ಮಂಜೂರಾತಿ ಆಗಿದೆ. 5:72ರಲ್ಲಿ ಕೆಲಸ ಪೂರ್ತಿಗೊಂಡಿದೆ. ಈಗ ಯೋಜನೆ ಚೆನ್ನಾಗಿ ನಡೆಯುತ್ತಿದೆ. ಆಗಾಗ್ಗೆ ದುರಸ್ಥಿ ಕೆಲಸಗಳನ್ನು ಮಾಡುತ್ತಾ ಬಂದಿದೆ.

4. ಯರಡೋಣಾ : ಈ ಯೋಜನೆ 22 8-70 ರಂದು 62,000 ರೂಪಾಯಿಗಳಿಗೆ ಮಂಜೂರಾತಿ ಆಗಿದೆ. 7:72 ರಲ್ಲಿ ಕೆಲಸ ಪೂರ್ತಿಗೊಂಡಿದೆ. ಈಗ ಯೋಜನೆ ಚೆನ್ನಾಗಿ ನಡೆಯುತ್ತಿದೆ ಅಲ್ಲದೆ ಯರಡೋಣಾ ಸುಧಾರಣೆ ಕೆಲಸ ಸಹ ಮಂಜೂರಾತಿ ಆಗಿದೆ. ಅದರ ಕೆಲಸ ಮುಂದಿನ ವರ್ಷ ಮುಗಿಸಲಾಗುವುದು.

(ಮಾನ್ಯ ಸದಸ್ಯರು ಹಾಜರಿರಲಿಲ್ಲ)

ವಿಷಯ : ರಾಜ್ಯದಲ್ಲಿರುವ ಇಂಜಿನಿಯರಿಂಗ್ ಕಾಲೇಜುಗಳಿಗೆ ಪ್ರವೇಶ.

ಪ್ರಶ್ನೆ. 204 (663) ಶ್ರೀ ಪಿ. ರಾಮದೇವ್ (ಮಲ್ಲೇಶ್ವರಂ).— ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ರಾಜ್ಯದ ಪ್ರತಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ 1982-83, 1983-84ನೇ ಸಾಲಿನಲ್ಲಿ ಪ್ರವೇಶ ಪಡೆದವರ ಸಂಖ್ಯೆ ;

ಆ) ಮೇಲ್ಕಂಡ ಅಭ್ಯರ್ಥಿಗಳಲ್ಲಿ ಕ್ಯಾಪಿಟೇಷನ್ ಶುಲ್ಕದ ಆಧಾರದ ಮೇಲೆ ಪ್ರವೇಶ ಪಡೆದವರ ಸಂಖ್ಯೆ ;

ಇ) ರಾಜ್ಯದ ಪ್ರತಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ವಸೂಲು ಮಾಡಿದ ಕ್ಯಾಪಿಟೇಷನ್ ಶುಲ್ಕದ ಹಣ ;

ಈ) ರಾಜ್ಯದ ಪ್ರತಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಪ್ರವೇಶ ನೀಡಲಾದ ಕನ್ನಡಿಗರ ಸಂಖ್ಯೆ?

ಉತ್ತರ : ಶ್ರೀ ಬಿ. ರಾಚಯ್ಯ (ಮಾನ್ಯ ವಿದ್ಯಾ ಮಂತ್ರಿಗಳು).— ಅ) ಮಾಹಿತಿ ಪಟ್ಟಿ ಲಗತ್ತಿಸಿದೆ. ಆ) ಮಾಹಿತಿ ಪಟ್ಟಿ ಲಗತ್ತಿಸಿದೆ ಇ) ರಾಜ್ಯದ ಎಲ್ಲಾ ಅನುದಾನ ಪಡೆಯುತ್ತಿರುವ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಮ್ಯಾನೇಜ್‌ಮೆಂಟ್ ಕೋಟಾ ಸ್ಥಾನಗಳಿಗೆ ಪ್ರತಿಯೊಂದು ಸ್ಥಾನಕ್ಕೆ ಕರ್ನಾಟಕದ ಅಭ್ಯರ್ಥಿಗಳಿಗೆ 6000 ರೂ. ಹಾಗೂ ಬೇರೆ ರಾಜ್ಯದವರಿಗೆ 12000 ರೂ. ಕ್ಯಾಪಿಟೇಷನ್ ಶುಲ್ಕ ವಸೂಲಿ ಮಾಡಬಹುದೆಂದು ಸರ್ಕಾರ ನಿಗದಿ ಪಡಿಸಿದೆ. ಪ್ರಸಕ್ತ (ಅನುದಾನ ಪಡೆಯದ) ಇಂಜಿನಿಯರಿಂಗ್ ಕಾಲೇಜುಗಳು ವಸೂಲು ಮಾಡುತ್ತಿರುವ ವ್ಯಕ್ತಿಪರ ಶುಲ್ಕದ ವಿಷಯದಲ್ಲಿ ಮಾಹಿತಿ ಲಭ್ಯವಿಲ್ಲ. ಈ) ಪ್ರತಿ ಕಾಲೇಜಿನಲ್ಲಿಯ ಪ್ರವೇಶ ಕೊಟ್ಟಂತಹ ಕರ್ನಾಟಕ ವಿದ್ಯಾರ್ಥಿಗಳ ಸಂಖ್ಯೆಯನ್ನು ಮಾಹಿತಿ ಪಟ್ಟಿಯಲ್ಲಿ ಕೊಟ್ಟಿದೆ. ನಮೂದಿಸಿರುವ ಈ ಸಂಖ್ಯೆಯಲ್ಲಿ ಸರಕಾರದ ವತಿಯಿಂದ ಸೇರಿಸಿದ ಪ್ರತಿಭಾ ಆಧಾರದ ಮೇಲೆ ಸೇರಿಸಿದ ಸ್ಥಾನಗಳು ಮತ್ತು ಆಡಳಿತ ವರ್ಗಕ್ಕೆ ಸಂಬಂಧಪಟ್ಟ ಸ್ಥಾನಗಳೂ ಸೇರಿವೆ.

ಮೊದಲನೇ ಬಿ. ಇ. ಪ್ರವೇಶ ಪಡೆದ ಕಾಲೇಜುವಾರು ಸಂಖ್ಯೆ ಹಾಗೂ ಕರ್ನಾಟಕದ ಅಭ್ಯರ್ಥಿಗಳ ಮಾಹಿತಿ ಪ್ರಶ್ನೆ ಸಂಖ್ಯೆ 663

ಕ್ರಮ ಸಂಖ್ಯೆ	ಕಾಲೇಜು	ಪ್ರವೇಶ ಪಡೆದವರ ಒಟ್ಟು ಸಂಖ್ಯೆ		ಕ್ಯಾಪಿಟೇಷನ್ ಶುಲ್ಕದ ಪ್ರವೇಶ ಸಂಖ್ಯೆ		ಪ್ರವೇಶ ಪಡೆದವರಲ್ಲಿ ಕರ್ನಾಟಕ ಅಭ್ಯರ್ಥಿಗಳ ಸಂಖ್ಯೆ	
		1982-83	83-84	82-83	83-84	82-83	83-84
1	ಬಿ.ಡಿ.ಟಿ ಇಂಜಿನಿಯರಿಂಗ್ ಕಾಲೇಜು, ದಾವಣಗೆರೆ	210	210	—	—	208	210
2	ಎಸ್.ಕೆ.ಎಸ್.ಜಿ.ಟಿ. ಬೆಂಗಳೂರು	37	37	—	—	35	32
3	ಯು.ವಿ.ಸಿ.ಇ. ಬೆಂಗಳೂರು	425	430	—	—	417	378
4	ಯುವಿಸಿಇ ಬೆಂಗಳೂರು (ಸಂಜೆ)	35	40	—	—	32	40
5	ಕೆ.ಆರ್.ಸಿ.ಇ. ಸುರತ್‌ಕಲ್	290	290	—	—	139	141